ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 24.12.29ರ 4ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 81 ಪ್ರಶ್ನೆಗಳ ಪೈಕಿ 76 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ-1)

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಅ) ವಿಷಯ : ರಾಯಚೂರು ಜಿಲ್ಲೆಯಲ್ಲಿ ಸರ್ಕಾರಿ ನೌಕರರ ಪ್ರತಿಭಟನೆ

ಶ್ರೀ ವೆಂಕಟರಾವ್ ನಾಡಗೌಡ (ಏಂಧನೂರು) : ಮಾನ್ಯ ಅಧ್ಯಕ್ಷರೆ, ನೆನ್ನೆ ನಾನು ಶೂನ್ಯವೇಳೆಯಲ್ಲಿ ಪ್ರಶ್ನೆಯನ್ನು ಕೇಳಬೇಕೆಂದು ವಿನಂತಿ ಮಾಡಿದ್ದೆ, ರಾಯಚೂರು ಜಿಲ್ಲೆಯಲ್ಲಿ ಎಲ್ಲಾ ಸರ್ಕಾರಿ ನೌಕರರು ಸಾಮೂಹಿಕ ರಜೆ ಮೇಲೆ ಹೋಗಿ, ಸರ್ಕಾರ ಅವರಿಗೆ ರಕ್ಷಣೆ ಕೊಡುತ್ತಿಲ್ಲ ಎನ್ನುವುದನ್ನು ಮೆರವಣಿಗೆ ಮಾಡುವುದರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 23.12.2009 ರಂದು ರಾಯಚೂರು ಜಿಲ್ಲೆಯ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಒಂದು ದಿವಸದ ಪ್ರತಿಭಟನೆ ನಡೆಸಿದರು. ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ಮಾಹಿತಿ ತರಿಸಿಕೊಂಡಿರುವ ರೀತಿಯಲ್ಲಿ ಅವರು ತಮ್ಮ ಮೇಲೆ ಆಗುತ್ತಿದ್ದ ಹಲ್ಲೆಯನ್ನು ಪ್ರತಿಭಟಿಸಿ ಅರ್ಧ ದಿವಸ ರಜ ಹಾಕಿದ್ದು ನಿಜ. ಅದಾದ ನಂತರ ಜಿಲ್ಲಾಧಿಕಾರಿಗಳು ಅವರನ್ನು ಕರೆಸಿ ಮಾತನಾಡಿದ ಮೇಲೆ ಅರ್ಧ ದಿನದ ನಂತರ ಕರ್ತವ್ಯಕ್ಕೆ ಹಾಜರಾಗಿ ಇನ್ನು ಒಂದು ತಾಸು ಹೆಚ್ಚಿಗೆ ಕೆಲಸ ಮಾಡಿದ್ದಾರೆ. ಯಾರ್ಯಾರು ಈ ರೀತಿ ಹಲ್ಲೆ ಮಾಡುತ್ತಿದ್ದರೋ ಅವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಬುಕ್ ಮಾಡಿದ್ದಾರೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಒಂದು ಜಿಲ್ಲೆಯಲ್ಲಿ ಎಲ್ಲಾ ಸಿಬ್ಬಂದಿ ರಜ ಹಾಕಿ ಹೋಗುತ್ತಾರೆ ಎಂದರೆ, ಸರ್ಕಾರ ಇದನ್ನು ಸ್ಪಷ್ಟಪಡಿಸಬೇಕು. ಯಾರು ಅವರಿಗೆ ಕಿರುಕುಳ ನೀಡುತ್ತಿದ್ದಾರೆ. ಏನಾಗುತ್ತಿದೆ

ಎಂದು ಮಾಹಿತಿ ನೀಡಬೇಕು. ಸಂಪೂರ್ಣ ಮಾಹಿತಿ ಹೇಳಿ. ಇವತ್ತು ಆಡಳಿತ ಸಂಪೂರ್ಣವಾಗಿ ಕುಸಿದಿದೆ.

(12-30 PM)

ಶ್ರೀ ವೆಂಕಟರಾವ್ ನಾಡಗೌಡ : ಅವರ ಮೇಲೆ ಈ ರೀತಿ ಹಲ್ಲೆ ಆಗುತ್ತಿರುವುದರ ಬಗ್ಗೆ ಮೊದಲೇ ಸರ್ಕಾರಕ್ಕೆ ತಿಳಿಸಿದ್ದರು. ನೀವು ಇಂತಹ ದಿನ ನಮಗೆ ರಕ್ಷಣೆ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳದೆ ಇದ್ದರೆ ನಾವು ಸಾಮೂಹಿಕ ರಜೆ ಮೇಲೆ ಹೋಗುತ್ತೇವೆ ಎನ್ನುವುದನ್ನು ಮುಂಚಿತವಾಗಿಯೇ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದರು. ಅವರು ರಜೆ ಮೇಲೆ ಹೋಗುವ ವರೆಗೂ ತಾವು ಯಾರೂ ಕೂಡ ಅವರನ್ನು ಕರೆದು ಮಾತನಾಡಿಸಲಿಲ್ಲ. ಅಲ್ಲಿನ ಜಿಲ್ಲಾಧಿಕಾರಿಗಳು ಕೂಡ ಕರೆದು ಮಾತನಾಡಿಸಲಿಲ್ಲ. ಹಾಗಾಗಿ ಅವರು ಅನಿವಾರ್ಯವಾಗಿ ಸಾಮೂಹಿಕ ರಜೆ ಹಾಕಿ ಹೋರಾಟಕ್ಕೆ ಇಳಿದಿದ್ದಾರೆ. ಸರ್ಕಾರ ಮೊದಲೇ ಕರೆದು ಮಾತನಾಡಬಹುದಾಗಿತ್ತಲ್ಲ? ಅಧಿಕಾರಿಗಳಿಗೂ ರಕ್ಷಣೆ ಕೊಡುವುದಿಲ್ಲ, ಈ ಕಡೆ ಜನರಿಗೂ ರಕ್ಷಣೆ ಕೊಡುವುದಿಲ್ಲ. ನೀವು ಏನು ರಕ್ಷಣೆ ಕೊಡುತ್ತೀರಿ ಎಂದು ಕೇಳಬೇಕು. ನಾವು ಒಂದು ನಿಮಿಷ ಮಾತನಾಡುವುದಕ್ಕಾದರೂ ಬಿಡಿ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಈಗಾಗಲೇ ಸ್ಪಷ್ಟ ಪಡಿಸಿದ್ದೇನೆ. ಅವರು ನೋಟಿಸ್ ಕೊಟ್ಟ ತಕ್ಷಣವೇ ನಿನ್ನೆ ಜಿಲ್ಲಾಧಿಕಾರಿಗಳನ್ನು ಕರೆಸಿ ಮಾತನಾಡಿ, ಎಲ್ಲಾ ಶಮನವಾಗಿದೆ. ಅದರ ಬಗ್ಗೆ ಕ್ರಮ ಕೂಡ ತೆಗೆದುಕೊಳ್ಳುತ್ತಿದ್ದೇವೆ.

ಆ) ವಿಷಯ : ಕಂದಾಯ ಮತ್ತು ಸರ್ವೆ ಇಲಾಖೆಗಳಲ್ಲಿ ಅರ್ಜಿ ವಿಲೇವಾರಿ ತಡವಾಗುತ್ತಿರುವ ಬಗ್ಗೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರ ಮತ್ತು ಖಾಸಗಿ ಒಡೆತನದ ಕಂದಾಯ ಮತ್ತು ಸರ್ವೆ ಇಲಾಖೆಗೆ ಸಂಬಂಧಿಸಿದಂತೆ ನೆಮ್ಮದಿ ಕೇಂದ್ರ, ಭೂಮಿ ಕೇಂದ್ರ, ಮ್ಯುಟೇಷನ್ ಮತ್ತು ಖಾತೆ ಬದಲಾವಣೆ ಬಗ್ಗೆ ಒಂದು ಪ್ರಸ್ತಾವನೆಯನ್ನು ಮಾನ್ಯ ಕಂದಾಯ ಸಚಿವರಿಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಜಿ. ಕರುಣಾಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಹೆಚ್.ಡಿ. ರೇವಣ್ಣನವರು ರೈತರು ಕೊಟ್ಟಿರುವಂತಹ ಅರ್ಜಿಗಳು ವಿಲೇವಾರಿ ಆಗುತ್ತಿರುವುದು ಡಿಲೇ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ನಾವು